# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 6022 / 2022

**ಚಾಸಾ ಃ- 01 / ಪ್ರಾಸಾ ಃ- 03**

| | |
|---|---|
| ಹೆಸರು | ದರ್ಶನ್ ಜಿ ಕೆ |
| ತಂದೆ ಹೆಸರು | ಕುಮಾರಸ್ವಾ ಮಿ |
| ವಯಸ್ಸು | 24 |
| ಉದ್ಯೋಗ | ಅಕೌಂಟ್ ಎಕ್ಸಿಕ್ಯೂಟರ್ , |
| ವಿಳಾಸ | ಗಟ್ಟೀಪುರ |

**ದಿನಾಂಕಃ 11.07.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಚಾಸಾ2 ರವರು ನನ್ನ ತಂದೆ. ದಿನಾಂಕ 04.08.2022 ರಂದು ಚಾಸಾ 2 ರವರು ಕೆಲಸಕ್ಕೆ ಎಂದು ಮಾಗಡಿಗೆ ಬರುವಾಗ ಬಸ್ ನಂ. ಕೆಎ 42 ಎಫ್ 0227 ಕೆಎಸ್ಆರ್ ಟಿಸಿ ಬಸ್ ಎ.ಕೆ.ದೊಡ್ಡಿಯಿಂದ ಮಾಗಡಿ ಬರುವಾಗ ಉಡುವೆಗೆರೆ ಹತ್ತಿರ ಸ್ಕೂಲ್ ಹಾಗೂ ದೇವಸ್ಥಾನ ಇದ್ದು ಸುಮಾರು 12.50 ಗಂಟೆಗೆ ಬಸ್ಸು ಅತಿವೇಗವಾಗಿ ಬಂದು ನೀರಿನ ಟ್ಯಾಂಕ್ ಗೆ ಗುದ್ದಿರುತ್ತಾರೆ. ಬಸ್ಸಿ ನಲ್ಲಿದ್ದ ನನ್ನ ತಂದೆಗೆ ತಲೆಗೆ, ಸೊಂಟಕ್ಕೆ ಮತ್ತು ಬೆನ್ನಿಗೆ ಏಟಾಗಿ ರಕ್ತ ಗಾಯಗಳಾಗಿರುತ್ತವೆ. ಸ್ಥಳದಲ್ಲಿದ್ದವರು ನನ್ನ ತಂದೆಯವರನ್ನು ಮಾಗಡಿಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತಾರೆ. ನಾನು ಕಾಲೇಜಿನಲ್ಲಿ ಇದ್ದಾಗ ನನಗೆ ಕಾಲ್ ಮಾಡಿ ಸದರಿ ವಿಷಯವನ್ನು ತಿಳಿಸಿದರು. ನಾನು ಆಸ್ಪತ್ರೆಗೆ ಬಂದು ನನ್ನ ತಂದೆಯವರನ್ನು ನೋಡಿದಾಗ ವಿಷಯ ನಿಜವಾಗಿತ್ತು. ನಂತರ ನಾನು ನಮ್ಮ ತಂದೆಯವರನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಂದು ದಿನಾಂಕ 05.08.2022 ರಂದು ದೂರನ್ನು ಕೊಟ್ಟಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ವಾಟೀಸವಾಲು ಃ-ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಬಸ್ಸಿನ ಚಾಲಕನು ಬಸ್ಸನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೆ ಬದಿಯಲ್ಲಿದ್ದ ನೀರಿನ ತೊಟ್ಟಿಗೆ ಡಿಕ್ಕಿ ಪಡಿಸಿದ್ದು ಸದರಿ ವಿಷಯವನ್ನು ನಿಮ್ಮ ತಂದೆಯವರು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ವಾಟೀ ಸವಾಲು** ಃ- **ಶ್ರೀ. ಎನ್ ಆರ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ನೀವು ಅಪಘಾತವಾದ ಸ್ಥ,ಳದಲ್ಲಿ ಇದ್ದಿರಲಿಲ್ಲ ಯಾರೋ ಹೇಳಿದ ವಿಚಾರದ ಮೇಲೆ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ನನ್ನ ತಂದೆಯವರು ಹೇಳಿದ ಮೇರೆಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದೂರಿನಲ್ಲಿ ನಿಮಗೆ ಯಾರು ಅಪಘಾತದ ವಿಷಯವನ್ನು ತಿಳಿಸಿರುತ್ತಾರೆ ಎಂದು ಅವರ ಹೆಸರನ್ನು ಬರೆದಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯವರು ತಿಳಿಸಿರುತ್ತಾರೆ ಎಂದು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಯಾರ ಮೂಲಕ ಅಪಘಾತದ ವಿಷಯ ನಿಮಗೆ ತಿಳಿದಿದರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯವರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಪರಿಹಾರ ಹಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಅಪಘಾತದ ಸ್ಥಳದಲ್ಲಿ ಇದ್ದಿರಲಿಲ್ಲ ಹಾಗೂ ನಿಮಗೆ ಯಾವುದೇ ಿಷಯ ತಿಳಿಯದೆ ಇದ್ದರೂ ಹಾಗೂ ಯಾವುದೇ ಅಪಘಾತ ಆಗದೇ ಇದ್ದರೂ ಆರೋಪಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ.ನ್ಯಾ.ದಂ.ಮತ್ತು ಜೆ.ಎಂ.ಎಫ್.ಸಿ.ಮಾಗಡಿ.**